Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)


भाग IX     अनुभाग 1
PART IX     SECTION 1
ಭಾಗ IX     ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.

| | | | |
|---|---|---|---|
| सं–1 | नई दिल्ली सोमवार, जनवरी 20, 1992 | पुष्य 30, 1913 (शक) | खण्ड–13 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಜನವರಿ ೨೦, ೧೯೯೨ | ಪುಷ್ಯ ೩೦, ೧೯೧೩ (ಶಕ) | ಸಂಪುಟ ೧೩ |
| No. 1 | New Delhi Monday, January 20, 1992 | Pushya 30, 1913 (Saka) | Vol. 13 |


## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely– (1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ [illegible] ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ [illegible], ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) [illegible] ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) [illegible] ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ [illegible] ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ [illegible] ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು [illegible].

Ministry of Law, Justice & Company Affairs

(Legislative Department)

New Delhi, November 26, 1991.

The Translations in Kannada of the following namely-(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ - (1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹಕ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) ದುಬಾರಿ ಬಡ್ಡಿ ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) ಮಹಿಳಾ ಅಸಭ್ಯ ರೂಪಣಾ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ ಅಂಚೆ ಕಛೇರಿ ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ ಹಾಜರ ಪಡಿಸುವಿಕೆಯನ್ನು ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs

(Legislative Department)

New Delhi, December 16, 1991.

The Traslations in Kannada of the following Acts namely (1) The Copy Right Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲ್ಯವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) ಅಂತರ ರಾಜ್ಯ ಜಲವಿವಾದ ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು ಪಾಲಕತ್ವ ಅಧಿನಿಯಮ, 1956 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಸುಧಾರಣಾ ಶಾಲೆಗಳ ಅಧಿನಿಯಮ, 1897

## (1897ರ 8)

[ಮಾರ್ಚ್ 11, 1897]

ಸುಧಾರಣಾ ಶಾಲೆಗಳಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವ ಮತ್ತು ಯುವಾಪರಾಧಿಗಳೊಂದಿಗೆ ವ್ಯವಹರಿಸುವುದಕ್ಕಾಗಿ ಹೆಚ್ಚಿನ ಉಪಬಂಧವನ್ನು ಮಾಡುವ ಅಧಿನಿಯಮ.

ಸುಧಾರಣಾ ಶಾಲೆಗಳಿಗೆ ಸಂಬಂಧಪಟ್ಟ ಕಾನೂನನ್ನು ತಿದ್ದುಪಡಿ ಮಾಡುವುದು ಮತ್ತು ಯುವಾಪರಾಧಿಗಳೊಂದಿಗೆ ವ್ಯವಹರಿಸುವುದಕ್ಕಾಗಿ ಹೆಚ್ಚಿನ ಉಪಬಂಧವನ್ನು ಮಾಡುವುದು ವಿಹಿತವಾಗಿರುವುದರಿಂದ :

ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ:—

### I—ಪ್ರಾರಂಭಿಕ

**1. ಹೆಸರು ಮತ್ತು ವ್ಯಾಪ್ತಿ:**—(1) ಈ ಅಧಿನಿಯಮವನ್ನು ಸುಧಾರಣಾ ಶಾಲೆಗಳ ಅಧಿನಿಯಮ, 1897 ಎಂದು ಕರೆಯತಕ್ಕದ್ದು.

(2) [* * * * * *]

(3) ಇದು, 1956ರ ನವೆಂಬರ್ 1ಕ್ಕೆ ನಿಕಟಪೂರ್ವದಲ್ಲಿ 'ಬಿ' ಭಾಗದ ರಾಜ್ಯಗಳಲ್ಲಿ ಒಳಗೊಂಡಿದ್ದಂಥ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2 ಮತ್ತು 3** (ನಿರಸನಗಳು) :—ನಿರಸನಗೊಳಿಸುವ ಅಧಿನಿಯಮ, 1938ರ (1938ರ 1) 2ನೇ ಪ್ರಕರಣ ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

**4. ಪರಿಭಾಷೆಗಳು :**—ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭಕ್ಕೆ ತದ್ವಿರುದ್ಧವಾದುದು ಏನಾದರೂ ಇದ್ದ ಹೊರತು,—

(ಕ) "ಯುವಾಪರಾಧಿ" ಎಂದರೆ ಗಡೀಪಾರು ಅಥವಾ ಕಾರಾವಾಸದಿಂದ ದಂಡನೀಯವಾದ ಯಾವುದೇ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣೀತನಾಗಿರುವ ಮತ್ತು ಅಂಥ ಅಪರಾಧ ನಿರ್ಣಯದ ಕಾಲದಲ್ಲಿ ಹದಿನೈದು ವರ್ಷಕ್ಕಿಂತ ಕಡಿಮೆ ವಯಸ್ಸಿನವನಾಗಿದ್ದ ಯಾವನೇ ಹುಡುಗ ;

(ಖ) "ಇನ್ಸ್‌ಪೆಕ್ಟರ್ ಜನರಲ್" ಎಂಬುದು ಇನ್ಸ್‌ಪೆಕ್ಟರ್ ಜನರಲ್‌ನಿಗೆ ಈ ಅಧಿನಿಯಮದ ಮೂಲಕ ವಿಧಿಸಲಾದ ಎಲ್ಲಾ ಅಥವಾ ಯಾವುದೇ ಕರ್ತವ್ಯವನ್ನು ನೆರವೇರಿಸಲು ರಾಜ್ಯ ಸರ್ಕಾರವು ನೇಮಕ ಮಾಡಿದ ಯಾವನೇ ಅಧಿಕಾರಿಯನ್ನು ಒಳಗೊಳ್ಳುತ್ತದೆ ; ಮತ್ತು

(ಗ) "ಜಿಲ್ಲಾ ಮ್ಯಾಜಿಸ್ಟ್ರೇಟ್" ಎಂಬುದು ಮುಖ್ಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟನನ್ನು ಒಳಗೊಳ್ಳತಕ್ಕದ್ದು.

### II—ಸುಧಾರಣಾ ಶಾಲೆಗಳು

**5. ಸುಧಾರಣಾ ಶಾಲೆಗಳನ್ನು ಸ್ಥಾಪಿಸಲು ಮತ್ತು ಮುಂದುವರಿಸದಿರಲು ಅಧಿಕಾರ:**—ರಾಜ್ಯಸರ್ಕಾರವು—

(ಕ) ಅದು ಸೂಕ್ತವೆಂದು ಯೋಚಿಸಬಹುದಾದಂಥ ಸ್ಥಳಗಳಲ್ಲಿ ಸುಧಾರಣಾ ಶಾಲೆಗಳನ್ನು ಸ್ಥಾಪಿಸಬಹುದು ಮತ್ತು ನಡೆಸಿಕೊಂಡು ಬರಬಹುದು ;

(ಖ) ಈ ಬಗ್ಗೆ ರಾಜ್ಯಸರ್ಕಾರವು ನಿಯಮಿಸಬಹುದಾದಂಥ ಈ ಅಧಿನಿಯಮಕ್ಕೆ ಸುಸಂಗತವಾದ ನಿಯಮಗಳಿಗೆ ಅನುಸಾರವಾಗಿ ಕೆಲಸ ಮಾಡಲು ಒಪ್ಪುವ ವ್ಯಕ್ತಿಗಳು ಇಟ್ಟಿರುವ ಶಾಲೆಗಳನ್ನು ಸುಧಾರಣಾ ಶಾಲೆಗಳನ್ನಾಗಿ ಉಪಯೋಗಿಸಬಹುದು ;

(ಗ) ಹಾಗೆ ಸ್ಥಾಪಿಸಿದ ಅಥವಾ ಉಪಯೋಗಿಸಿದ ಯಾವುದೇ ಶಾಲೆಯು ಸುಧಾರಣಾ ಶಾಲೆಯಾಗಿರುವುದು ಅಥವಾ ಹಾಗೆ ಉಪಯೋಗಿಸುವುದು ನಿಂತುಹೋಗತಕ್ಕದ್ದೆಂದು ನಿರ್ದೇಶಿಸಬಹುದು.

**6. ಶಾಲೆಗಳ ಅಗತ್ಯತೆಗಳು:**—ಹಾಗೆ ಸ್ಥಾಪಿಸಲಾದ ಅಥವಾ ಉಪಯೋಗಿಸಲಾದ ಪ್ರತಿಯೊಂದು ಶಾಲೆಯು,—

(ಕ) ರಾತ್ರಿಯಲ್ಲಿ ನಿವಾಸಿಗಳನ್ನು ಪ್ರತ್ಯೇಕವಾಗಿಡಲು ಸಾಕಷ್ಟು ಸಾಧನಗಳನ್ನು ;

(ಖ) ಅದರಲ್ಲಿ ಬಂಧಿಸಿಟ್ಟಿರುವ ಯುವಾಪರಾಧಿಗಳಿಗೆ ಸರಿಯಾದ ನೈರ್ಮಲ್ಯ ವ್ಯವಸ್ಥೆಗಳು, ನೀರು ಸರಬರಾಜು, ಆಹಾರ, ಬಟ್ಟೆ ಮತ್ತು ಹಾಸಿಗೆಯನ್ನು ;

(ಗ) ಅಂಥ ಯುವಾಪರಾಧಿಗಳಿಗೆ ಕೈಗಾರಿಕಾ ತರಬೇತಿಯನ್ನು ಕೊಡಲು ಸಾಧನಗಳನ್ನು ;

(ಘ) ಕಾಯಿಲೆಯಾಗಿರುವಾಗ ಅಂಥ ಯುವಾಪರಾಧಿಗಳನ್ನು ಸ್ವೀಕರಿಸುವುದಕ್ಕಾಗಿ ರೋಗ ಚಿಕಿತ್ಸಾಲಯ ಅಥವಾ ಸೂಕ್ತ ಸ್ಥಳವನ್ನು

—ಒದಗಿಸತಕ್ಕದ್ದು.

**7. ಸುಧಾರಣಾ ಶಾಲೆಗಳ ಪರಿಶೀಲನೆ:**—(1) ಸುಧಾರಣಾ ಶಾಲೆಗಳಾಗಿ ಸ್ಥಾಪಿಸಲು ಅಥವಾ ಉಪಯೋಗಿಸಲು ಉದ್ದೇಶಿಸಿರುವ ಪ್ರತಿಯೊಂದು ಶಾಲೆಯನ್ನು, ಅವುಗಳನ್ನು ಹಾಗೆಂದು ಉಪಯೋಗಿಸುವುದಕ್ಕೆ ಮುಂಚೆ ಇನ್‌ಸ್ಪೆಕ್ಟರ್ ಜನರಲ್ಲನು ಪರಿಶೀಲಿಸತಕ್ಕದ್ದು ಮತ್ತು 6ನೇ ಪ್ರಕರಣದಲ್ಲಿನ ಅಗತ್ಯತೆಗಳನ್ನು ಪಾಲಿಸಲಾಗಿದೆಯೆಂದು ಅವನಿಗೆ ಕಂಡುಬಂದರೆ ಮತ್ತು ಈ ಅಧಿನಿಯಮದ ಮೇರೆಗೆ ಅಲ್ಲಿಗೆ ಕಳುಹಿಸಬಹುದಾದಂಥ ಯುವಾಪರಾಧಿಗಳನ್ನು ಸ್ವೀಕರಿಸುವುದಕ್ಕಾಗಿ ಅಂಥ ಶಾಲೆಯು ಯೋಗ್ಯವೆಂದು ಅವನು ಅಭಿಪ್ರಾಯಪಟ್ಟರೆ, ಅವನು ಆ ಬಗ್ಗೆ ಪ್ರಮಾಣೀಕರಿಸತಕ್ಕದ್ದು ಮತ್ತು ಅಂಥ ಪ್ರಮಾಣಪತ್ರವನ್ನು ಸುಧಾರಣಾ ಶಾಲೆಯೆಂದು ಶಾಲೆಯನ್ನು ಸ್ಥಾಪಿಸುವ ಅಥವಾ ಹಾಗೆಂದು ಅದನ್ನು ಉಪಯೋಗಿಸತಕ್ಕದೆಂದು ನಿರ್ದೇಶಿಸುವ ರಾಜ್ಯ ಸರ್ಕಾರದ ಆದೇಶದೊಂದಿಗೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಆ ಶಾಲೆಯು ಸುಧಾರಣಾ ಶಾಲೆಯಾಗಿರುವುದಾಗಿ ಭಾವಿಸತಕ್ಕದ್ದು.

(2) ಅಂಥ ಪ್ರತಿಯೊಂದು ಶಾಲೆಗೆ ಕಾಲಕಾಲಕ್ಕೆ ಮತ್ತು ಕನಿಷ್ಠ ಪಕ್ಷ ವರ್ಷಕ್ಕೊಮ್ಮೆ ಸದರಿ ಇನ್‌ಸ್ಪೆಕ್ಟರ್ ಜನರಲ್ಲನು ಭೇಟಿ ಕೊಡತಕ್ಕದ್ದು. ಅವನು ರಾಜ್ಯಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಶಾಲೆಯ ಸ್ಥಿತಿಯ ಬಗ್ಗೆ ವರದಿಯನ್ನು ರಾಜ್ಯಸರ್ಕಾರಕ್ಕೆ ಕಳುಹಿಸತಕ್ಕದ್ದು.

**8. ಯುವಾಪರಾಧಿಗಳನ್ನು ಸುಧಾರಣಾ ಶಾಲೆಗಳಿಗೆ ಕಳುಹಿಸಬೇಕೆಂದು ನಿರ್ದೇಶಿಸಲು ನ್ಯಾಯಾಲಯಗಳ ಅಧಿಕಾರ** :–(1) ಯಾವನೇ ಯುವಾಪರಾಧಿಗೆ ಗಡಿಪಾರು ಅಥವಾ ಕಾರಾವಾಸ ಶಿಕ್ಷೆಯನ್ನು ವಿಧಿಸಿದಾಗಲೆಲ್ಲಾ ಮತ್ತು ಅವನಿಗೆ ಶಿಕ್ಷೆಯನ್ನು ವಿಧಿಸಿದಂಥ ನ್ಯಾಯಾಲಯದ ಅಭಿಪ್ರಾಯದಲ್ಲಿ ಅವನು ಸುಧಾರಣಾ ಶಾಲೆಯಲ್ಲಿ ನಿವಾಸಿಯಾಗಿರಲು ತಕ್ಕ ವ್ಯಕ್ತಿಯಾಗಿದ್ದರೆ, ಆ ನ್ಯಾಯಾಲಯವು, ರಾಜ್ಯ ಸರ್ಕಾರವು ರಚಿಸಿದ ಯಾವುವೇ ನಿಯಮಗಳಿಗೊಳಪಟ್ಟು, ಅವನು ಶಿಕ್ಷೆಯನ್ನು ಅನುಭವಿಸುವ ಬದಲು ಅವನನ್ನು ಅಂತಹ ಶಾಲೆಗೆ ಕಳುಹಿಸತಕ್ಕದೆಂದು ಮತ್ತು ಅಲ್ಲಿ ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದ ಅಥವಾ ಏಳು ವರ್ಷಗಳಿಗಿಂತ ಹೆಚ್ಚಿಲ್ಲದಂಥ ಅವಧಿಯವರೆಗೆ ಅವನನ್ನು ಬಂಧಿಸಿಡತಕ್ಕದೆಂದು ನಿರ್ದೇಶಿಸಬಹುದು.

(2) ಈ ಪ್ರಕರಣದ ಮೂಲಕ ನ್ಯಾಯಾಲಯಕ್ಕೆ ಹಾಗೆ ಪ್ರದಾನ ಮಾಡಿದ ಅಧಿಕಾರಗಳನ್ನು (ಕ) ಉಚ್ಚ ನ್ಯಾಯಾಲಯ (ಖ) ಸೆಷನ್ಸ್ ನ್ಯಾಯಾಲಯ (ಗ) ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು (ಘ) ಈ ಬಗ್ಗೆ ರಾಜ್ಯ ಸರ್ಕಾರವು ವಿಶೇಷವಾಗಿ ಶಕ್ತಗೊಳಿಸಿದ ಯಾವನೇ ಮ್ಯಾಜಿಸ್ಟ್ರೇಟನು ಮಾತ್ರ ಚಲಾಯಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯಗಳು ಆ ಪ್ರಕರಣವು ಮುಂದೆ ಮೂಲತಃವಾಗಿಯಾಗಲಿ ಅಥವಾ ಅಪೀಲಿನಲ್ಲಿಯಾಗಲಿ ಬಂದರೆ ಅವುಗಳನ್ನು ಚಲಾಯಿಸಬಹುದು.

(3) ರಾಜ್ಯ ಸರ್ಕಾರವು, —

(ಕ) ಯುವಾಪರಾಧಿಗಳ ಅಪರಾಧದ ಸ್ವರೂಪ ಅಥವಾ ಇತರ ಪರಿಗಣನೆಗಳನ್ನು ಗಮನದಲ್ಲಿಟ್ಟುಕೊಂಡು, ಸುಧಾರಣಾ ಶಾಲೆಗಳಿಗೆ ಯಾವ ಯುವಾಪರಾಧಿಗಳನ್ನು ಕಳುಹಿಸತಕ್ಕದ್ದು ಎಂಬುದನ್ನು ನಿರ್ಧರಿಸುವುದಕ್ಕಾಗಿ ; ಮತ್ತು

(ಖ) ಯುವಾಪರಾಧಿಗಳ ವಯಸ್ಸು ಅಥವಾ ಇತರ ಪರಿಗಣನೆಗಳಿಗನುಸಾರವಾಗಿ ಅಂಥ ಶಾಲೆಗಳಿಗೆ ಅವರನ್ನು ಕಳುಹಿಸಬಹುದಾದಂಥ ಅವಧಿಗಳನ್ನು ವಿನಿಯಮಿಸುವುದಕ್ಕಾಗಿ

—ನಿಯಮಗಳನ್ನು ರಚಿಸಬಹುದು.

**9. 8ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡಲು ಮ್ಯಾಜಿಸ್ಟ್ರೇಟರನ್ನು ಶಕ್ತಗೊಳಿಸಿಲ್ಲದಿರುವಲ್ಲಿ ಪ್ರಕ್ರಿಯೆ:**—

(1) ಕೊನೆಯ ಹಿಂದಿನ ಪ್ರಕರಣದ ಮೇರೆಗೆ ಆದೇಶವನ್ನು ಮಾಡಲು ಶಕ್ತಗೊಳಿಸಿಲ್ಲದ ಯಾವನೇ ಮ್ಯಾಜಿಸ್ಟ್ರೇಟನು ತಾನು ಅಪರಾಧಿಯೆಂದು ನಿರ್ಣಯಿಸಿದ ಯುವಾಪರಾಧಿಯು ಯಾವುದೇ ಸುಧಾರಣಾ ಶಾಲೆಯ ನಿವಾಸಿಯಾಗಿರಲು ತಕ್ಕ ವ್ಯಕ್ತಿಯೆಂದು ಅಭಿಪ್ರಾಯಪಟ್ಟಾಗ, ಅವನು ಶಿಕ್ಷೆಯನ್ನು ವಿಧಿಸದೆ ಅಂತಹ ಅಭಿಪ್ರಾಯವನ್ನು ದಾಖಲು ಮಾಡಬಹುದು ಮತ್ತು ಅವನ ವ್ಯವಹರಣೆಗಳನ್ನು ಅವನು ಯಾರಿಗೆ ಅಧೀನನಾಗಿರುವನೋ ಆ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಒಪ್ಪಿಸತಕ್ಕದ್ದು ಮತ್ತು ಆ ಯುವಾಪರಾಧಿಯನ್ನು ಅವನ ಬಳಿಗೆ ಕಳುಹಿಸತಕ್ಕದ್ದು.

(2) ಯಾರಿಗೆ ಆ ವ್ಯವಹರಣೆಗಳನ್ನು ಹಾಗೆ ಒಪ್ಪಿಸಲಾಗಿದೆಯೋ ಆ ಮ್ಯಾಜಿಸ್ಟ್ರೇಟನು ಅವನು ಸೂಕ್ತವೆಂದು ಯೋಚಿಸಬಹುದಾದಂಥ ಹೆಚ್ಚಿನ ವಿಚಾರಣೆ (ಯಾವುದಾದರೂ ಇದ್ದರೆ)ಯನ್ನು ಮಾಡಬಹುದು ಮತ್ತು ಅವನು ಅಂಥ ಯುವಾಪರಾಧಿಯ ಬಗ್ಗೆ ಅವನನ್ನು ಮೂಲತಃ ಅಧಿವಿಚಾರಣೆ ಮಾಡಿದ್ದರೆ ಅವನು ಕೊಡಬಹುದಾಗಿದ್ದಂಥ ಶಿಕ್ಷೆಯನ್ನು ಕೊಡಬಹುದು ಮತ್ತು ಆ ಯುವಾಪರಾಧಿಯನ್ನು ಸುಧಾರಣಾ ಶಾಲೆಯಲ್ಲಿ ಬಂಧನದಲ್ಲಿಡುವುದಕ್ಕಾಗಿ ಅಥವಾ ಅನ್ಯಥಾ ಆದೇಶಿಸಬಹುದು.

**10. ಕಾರಾವಾಸ ಶಿಕ್ಷೆಗೆ ಗುರಿಪಡಿಸಿದ ಹದಿನೈದು ವರ್ಷದೊಳಗಿನ ಹುಡುಗರನ್ನು ಸುಧಾರಣಾ ಶಾಲೆಗಳಿಗೆ ಕಳುಹಿಸುವಂತೆ ನಿರ್ದೇಶಿಸಲು ಮ್ಯಾಜಿಸ್ಟ್ರೇಟನ ಅಧಿಕಾರ** :— ಕಾರಾವಾಸದ ಶಿಕ್ಷೆಯನ್ನು ಜಾರಿಗೊಳಿಸುವಲ್ಲಿ, ಯಾವ ಕಾರಾಗೃಹದಲ್ಲಿ ಯುವಾಪರಾಧಿಯನ್ನು ಬಂಧಿಸಿಡಲಾಗಿದೆಯೋ ಆ ಕಾರಾಗೃಹದ ಪ್ರಭಾರದಲ್ಲಿರುವ ಅಧಿಕಾರಿಯು, ಅಪರಾಧಿಗೆ ಆಗ ಹದಿನೈದು ವರ್ಷಗಳು ತುಂಬಿಲ್ಲದಿದ್ದರೆ ಅವನನ್ನು ಯಾವ ಜಿಲ್ಲಾ ಮ್ಯಾಜಿಸ್ಟ್ರೇಟನ ಅಧಿಕಾರ ವ್ಯಾಪ್ತಿಯಲ್ಲಿ ಅಂಥ ಕಾರಾಗೃಹವು ಇರುವುದೋ ಆ ಜಿಲ್ಲಾ ಮ್ಯಾಜಿಸ್ಟ್ರೇಟನ ಮುಂದೆ ಹಾಜರುಪಡಿಸಬಹುದು ಮತ್ತು ಅಂಥ ಮ್ಯಾಜಿಸ್ಟ್ರೇಟನು ಅಂಥ ಯುವಾಪರಾಧಿಯು ಸುಧಾರಣಾ ಶಾಲೆಯ ನಿವಾಸಿಯಾಗಿರಲು ತಕ್ಕ ವ್ಯಕ್ತಿಯಾಗಿರುವುದಾಗಿ ಅವನಿಗೆ ಕಂಡುಬಂದರೆ, ಅವನು ಉಳಿದ ಶಿಕ್ಷೆಯನ್ನು ಅನುಭವಿಸುವುದಕ್ಕೆ ಬದಲು ಅವನನ್ನು ಸುಧಾರಣಾ ಶಾಲೆಗೆ ಕಳುಹಿಸತಕ್ಕದೆಂದು ಮತ್ತು ಅಲ್ಲಿ ಒಂದು ಅವಧಿಯವರೆಗೆ ಬಂಧನದಲ್ಲಿಡತಕ್ಕದೆಂದು ನಿರ್ದೇಶಿಸಬಹುದು, ಆ ಅವಧಿಯು 8ನೇ ಪ್ರಕರಣದಲ್ಲಿ ಅಧಿಕೃತಗೊಳಿಸಿದ ಬಂಧನದ ಅವಧಿಗೆ ಸಂಬಂಧಿಸಿದಂತೆ ಆ ಪ್ರಕರಣದ ಮೂಲಕ ಅಥವಾ ಅದರ ಮೇರೆಗೆ ನಿಯಮಿಸಲಾದಂಥವೇ ಮಿತಿಗಳಿಗೆ ಒಳಪಟ್ಟಿರತಕ್ಕದ್ದು.

**11. ಯುವಾಪರಾಧಿಯ ವಯಸ್ಸಿನ ಬಗ್ಗೆ ಪ್ರಾರಂಭಿಕ ವಿಚಾರಣೆ ಮತ್ತು ನಿರ್ಣಯ** :—8ನೇ ಪ್ರಕರಣ, 9ನೇ ಪ್ರಕರಣ ಅಥವಾ 10ನೇ ಪ್ರಕರಣದ ಮೇರೆಗೆ ಸುಧಾರಣಾ ಶಾಲೆಗೆ ಯುವಾಪರಾಧಿಯನ್ನು ಕಳುಹಿಸಲು ನಿರ್ದೇಶಿಸುವುದಕ್ಕೆ ಮುಂಚೆ ನ್ಯಾಯಾಲಯವು ಅಥವಾ ಮ್ಯಾಜಿಸ್ಟ್ರೇಟನು ಅವನ ವಯಸ್ಸಿನ ಪ್ರಶ್ನೆಯ ಬಗ್ಗೆ ವಿಚಾರಣೆ ಮಾಡತಕ್ಕದ್ದು ಮತ್ತು ಅವಶ್ಯವೆಂದು ಭಾವಿಸಬಹುದಾದಂಥ ಸಾಕ್ಷ್ಯ (ಯಾವುದಾದರೂ ಇದ್ದರೆ)ಅದನ್ನು ತೆಗೆದುಕೊಂಡ ತರುವಾಯ, ಅವನ ವಯಸ್ಸನ್ನು ಆದಷ್ಟು ಮಟ್ಟಿಗೆ ತಿಳಿಸಿ ಅದರ ಬಗ್ಗೆ ನಿರ್ಣಯವನ್ನು ದಾಖಲು ಮಾಡತಕ್ಕದ್ದು.

(2) 9ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಅಗತ್ಯಪಡಿಸಿದಂತೆ ಜಿಲ್ಲಾ ಮಾಜಿಸ್ಟ್ರೇಟನಿಗೆ ಅವನ ವ್ಯವಹರಣೆಗಳನ್ನು ಒಪ್ಪಿಸುವುದಕ್ಕೆ ಮತ್ತು ಯುವಾಪರಾಧಿಯನ್ನು ಅವನ ಬಳಿ ಕಳುಹಿಸುವುದಕ್ಕೆ ಮುಂಚೆ, 8ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡಲು ಶಕ್ತಗೊಳಿಸಿಲ್ಲದಿರುವ ಪ್ರತಿಯೊಬ್ಬ ಮ್ಯಾಜಿಸ್ಟ್ರೇಟನು ಅಂಥದೇ ವಿಚಾರಣೆಯನ್ನು ಮಾಡತಕ್ಕುದು ಮತ್ತು ನಿರ್ಣಯವನ್ನು ದಾಖಲು ಮಾಡತಕ್ಕದ್ದು.

**12. ಸರ್ಕಾರವು ಅಂತಹ ಅಪರಾಧಿಗಳನ್ನು ಕಳುಹಿಸತಕ್ಕಂಥ ಸುಧಾರಣಾ ಶಾಲೆಯನ್ನು ನಿರ್ಧರಿಸತಕ್ಕದ್ದು :—** ಸಂಧಾರಣಾ ಶಾಲೆಗೆ ಕಳುಹಿಸಬೇಕೆಂದು ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು ನಿರ್ದೇಶಿಸಿದ ಪ್ರತಿಯೊಬ್ಬ ಯುವಾಪರಾಧಿಯನ್ನು, ರಾಜ್ಯ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಂಥ ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು ಹಾಗೆ ವ್ಯವಹರಿಸಿದ ಯುವಾಪರಾಧಿಯನ್ನು ಸ್ವೀಕರಿಸುವುದಕ್ಕಾಗಿ ಗೊತ್ತುಪಡಿಸಬಹುದಾದಂಥ ಸಂಧಾರಣಾ ಶಾಲೆಗೆ ಕಳುಹಿಸತಕ್ಕದ್ದು :

ಪರಂತು, ಅಂತಹ ಯುವಾಪರಾಧಿಗೆ ಸುಧಾರಣಾ ಶಾಲೆಯಲ್ಲಿ ಸ್ಥಳಾವಕಾಶವು ಕೂಡಲೇ ಲಭ್ಯವಿಲ್ಲದಿದ್ದರೆ,—

(ಕ) ಅವನನ್ನು ಸಂಧಾರಣಾ ಶಾಲೆಗೆ ಕಳುಹಿಸುವವರೆಗೆ ; ಅಥವಾ

(ಖ) ಅವನ ಮೂಲ ಶಿಕ್ಷೆಯ ಅವಧಿಯು ಮುಕ್ತಾಯವಾಗುವವರೆಗೆ

—ಇವುಗಳಲ್ಲಿ ಯಾವುದು ಮೊದಲು ಸಂಭವಿಸುವುದೋ ಅಲ್ಲಿಯವರೆಗೆ ಅವನನ್ನು ಬಾಲಕ ವಾರ್ಡಿನಲ್ಲಿ ಅಥವಾ ರಾಜ್ಯಸರ್ಕಾರವು ನಿರ್ದೇಶಿಸಬಹುದಾದಂಥ ಕಾರಾಗೃಹದ ಇತರ ಸೂಕ್ತ ಭಾಗದಲ್ಲಿ ಬಂಧಿಸಿಡಬಹುದು. ಅವನ ಮೂಲ ಶಿಕ್ಷೆಯ ಅವಧಿಯು ಮೊದಲು ಮುಕ್ತಾಯವಾದರೆ ಅವನನ್ನು ಆ ತರುವಾಯ ಬಿಡುಗಡೆ ಮಾಡತಕ್ಕದ್ದು, ಆದರೆ ಅವನನ್ನು ಸುಧಾರಣಾ ಶಾಲೆಗೆ ಕಳುಹಿಸಬೇಕಾದಲ್ಲಿ ಆಗ ಅವನು ಈ ಹಿಂದೆ ಅನುಭವಿಸಿದ ಬಂಧನದ ಅವಧಿಯನ್ನು ಸಂಧಾರಣಾ ಶಾಲೆಯಲ್ಲಿ ಬಂಧನದಲ್ಲಿಟ್ಟಿದ್ದಂತೆ ಪರಿಗಣಿಸತಕ್ಕದ್ದು.

**13. ಹದಿನೆಂಟು ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರುವುದಾಗಿ ಕಂಡುಬಂದ ವ್ಯಕ್ತಿಗಳನ್ನು ಸುಧಾರಣಾ ಶಾಲೆಗಳಲ್ಲಿ ಬಂಧಿಸಿಡತಕ್ಕದ್ದಲ್ಲ:—**(1) ಯುವಾಪರಾಧಿಯನ್ನು ಸಂಧಾರಣಾ ಶಾಲೆಗೆ ಕಳುಹಿಸಿದ ತರುವಾಯ ಯಾವುದೇ ಕಾಲದಲ್ಲಿ ಸಂದರ್ಭಾನುಸಾರ, ಸಂದರ್ಶಕರ ಸಮಿತಿ ಅಥವಾ ವ್ಯವಸ್ಥಾಪನಾ ಮಂಡಲಿಗೆ ಅಂತಹ ಯುವಾಪರಾಧಿಯು ವಯಸ್ಸನ್ನು ಬಂಧನಕ್ಕಾಗಿನ ಆದೇಶದಲ್ಲಿ ಕಡಿಮೆಯಾಗಿ ಹೇಳಲಾಗಿದೆ ಎಂದು ಮತ್ತು ಯಾವ ಅವಧಿಯವರೆಗೆ ಅವನನ್ನು ಬಂಧನದಲ್ಲಿರಿಸಬೇಕೆಂದು ಆದೇಶಿಸಲಾಗಿದೆಯೋ ಆ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಅವನಿಗೆ ಹದಿನೆಂಟು ವರ್ಷ ವಯಸ್ಸು ತುಂಬುವುದೆಂದು ಕಂಡುಬಂದರೆ, ಅವರು ಆ ಪ್ರಕರಣವನ್ನು ರಾಜ್ಯ ಸರ್ಕಾರದ ಆದೇಶಗಳಿಗಾಗಿ ವರದಿ ಮಾಡತಕ್ಕದ್ದು.

(2) ಯಾವನೇ ವ್ಯಕ್ತಿಯನ್ನು ಅವನಿಗೆ ಹದಿನೆಂಟು ವರ್ಷ ವಯಸ್ಸು ತುಂಬಿದೆ ಎಂದು ರಾಜ್ಯ ಸರ್ಕಾರಕ್ಕೆ ಕಂಡುಬಂದ ತರುವಾಯ ಸಂಧಾರಣಾ ಶಾಲೆಯಲ್ಲಿ ಬಂಧನದಲ್ಲಿಡತಕ್ಕದ್ದಲ್ಲ.

**14. ಸರ್ಕಾರದ ಆದೇಶದ ಮೂಲಕ ವಿಮೋಚನೆ ಅಥವಾ ಸ್ಥಳಾಂತರಣ:—**ರಾಜ್ಯ ಸರ್ಕಾರವು ಯಾವುದೇ ಕಾಲದಲ್ಲಿ ಯಾವನೇ ಯುವಾಪರಾಧಿಯನ್ನು,—

(ಕ) ಸಂಧಾರಣಾ ಶಾಲೆಯಿಂದ ವಿಮೋಚನೆ ಮಾಡಬೇಕೆಂದು ;

(ಖ) ಒಂದು ಸಂಧಾರಣಾ ಶಾಲೆಯಿಂದ ಸರ್ಕಾರದ ಅಧೀನದಲ್ಲಿರುವ ರಾಜ್ಯಕ್ಷೇತ್ರದೊಳಗಿರುವ ಇನ್ನೊಂದು ಅಂತಹ ಶಾಲೆಗೆ ಸ್ಥಳಾಂತರಿಸಬೇಕೆಂದು ಆದೇಶಿಸಬಹುದು :

ಪರಂತು, ಸಂಧಾರಣಾ ಶಾಲೆಯಲ್ಲಿ ಅವನ ಬಂಧನ ಪೂರ್ಣ ಅವಧಿಯನ್ನು ಅಂಥ ಸ್ಥಳಾಂತರದಿಂದಾಗಿ ಹೆಚ್ಚಿಸತಕ್ಕದ್ದಲ್ಲ.

**15. ರಾಜ್ಯಗಳ ನಡುವಣ ಒಪ್ಪಂದಗಳು:—**ಯಾವುವೇ ಎರಡು ರಾಜ್ಯಗಳ ರಾಜ್ಯ ಸರ್ಕಾರಗಳು ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಮಾಡಿಕೊಂಡ ಪರಸ್ಪರ ಒಪ್ಪಂದದ ತರುವಾಯ ಅವುಗಳ ಅನುಕ್ರಮ ಸರ್ಕಾರಿ ರಾಜಪತ್ರಗಳಲ್ಲಿ ಒಂದು ರಾಜ್ಯದಲ್ಲಿರುವ ಯಾವುದೇ ಸಂಧಾರಣಾ ಶಾಲೆಯು ಇನ್ನೊಂದು ರಾಜ್ಯದಲ್ಲಿನ ಯಾವುದೇ ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನು ಸಂಧಾರಣಾ ಶಾಲೆಗೆ ಕಳುಹಿಸಿಕೊಡಬೇಕೆಂದು ನಿರ್ದೇಶಿಸಿದ ಯುವಾಪರಾಧಿಗಳನ್ನು ಸ್ವೀಕರಿಸುವುದಕ್ಕಾಗಿ ಲಭ್ಯವಿರತಕ್ಕದೆಂದು ಅಧಿಸೂಚಿಸಬಹುದು ಮತ್ತು ಆ ತರುವಾಯ ತದನುಸಾರವಾಗಿ ಯುವಾಪರಾಧಿಗಳನ್ನು ಸ್ಥಳಾಂತರಿಸುವುದಕ್ಕಾಗಿ ವ್ಯವಸ್ಥೆ ಮಾಡಬಹುದು.

**16. ಕೆಲವು ಆದೇಶಗಳು, ಅಪೀಲು ಅಥವಾ ಪುನರೀಕ್ಷಣೆಗೆ ಒಳಪಟ್ಟಿರತಕ್ಕದ್ದಲ್ಲ:—**ದಂಡ ಪ್ರಕ್ರಿಯಾ ಸಂಹಿತೆ, 1882(1882ರ 10)ರಲ್ಲಿ ಅಡಕವಾಗಿರುವುದು ಯಾವುದೂ, ಯಾವುದೇ ನ್ಯಾಯಾಲಯ ಅಥವಾ ಮ್ಯಾಜಿಸ್ಟ್ರೇಟನನ್ನು ಅಪೀಲು ಅಥವಾ ಪುನರೀಕ್ಷಣೆಯಲ್ಲಿ, ಯುವಾಪರಾಧಿಯ ವಯಸ್ಸಿಗೆ ಸಂಬಂಧಿಸಿದಂತೆ ಮಾಡಿದ ಯಾವುದೇ ಆದೇಶವನ್ನು ಬದಲಾಯಿಸಲು ಅಥವಾ ವಿಪರ್ಯಯಗೊಳಿಸಲು ಅಥವಾ ಸಂಧಾರಣಾ ಶಾಲೆಯಲ್ಲಿ ಬಂಧಿಸಿಡುವುದಕ್ಕಾಗಿನ ಆದೇಶವನ್ನು ಗಡಿಪಾರು ಅಥವಾ ಕಾರಾವಾಸಕ್ಕಾಗಿ ಬದಲಾಯಿಸಲು ಅಧಿಕೃತಗೊಳಿಸುವುದೆಂದು ಅರ್ಥೈಸತಕ್ಕದ್ದಲ್ಲ.

## III ಸುಧಾರಣಾ ಶಾಲೆಗಳ ವ್ಯವಸ್ಥಾಪನೆ

**17. ಸೂಪರಿಂಟೆಂಡೆಂಟ್ ಮತ್ತು ಸಂದರ್ಶಕರ ಸಮಿತಿ ಅಥವಾ ವ್ಯವಸ್ಥಾಪನಾ ಮಂಡಲಿಯ ನೇಮಕಾತಿ:—** (1) ಪ್ರತಿಯೊಂದು ಸುಧಾರಣಾ ಶಾಲೆಯ ನಿಯಂತ್ರಣ ಮತ್ತು ವ್ಯವಸ್ಥಾಪನೆಗಾಗಿ ರಾಜ್ಯ ಸರ್ಕಾರವು—

(ಕ) ಸೂಪರಿಂಟೆಂಡೆಂಟರನ್ನಾಗಲಿ ಮತ್ತು ಸಂದರ್ಶಕರ ಸಮಿತಿಯನ್ನಾಗಲಿ ; ಅಥವಾ

(ಖ) ಒಂದು ವ್ಯವಸ್ಥಾಪನಾ ಮಂಡಲಿಯನ್ನಾಗಲಿ

—ನೇಮಕ ಮಾಡತಕ್ಕದ್ದು.

(2) ಹಾಗೆ ನೇಮಕಗೊಂಡ ಪ್ರತಿಯೊಂದು ಸಮಿತಿ ಮತ್ತು ಪ್ರತಿಯೊಂದು ಮಂಡಲಿಯು ಕನಿಷ್ಠ ಐದು ವ್ಯಕ್ತಿಗಳಿಗಿಂತ ಕಡಿಮೆಯಿಲ್ಲದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು.

(3) ರಾಜ್ಯ ಸರ್ಕಾರವು, ಹಾಗೆ ನೇಮಕಗೊಂಡ ಯಾವನೇ ಸೂಪರಿಂಟೆಂಡೆಂಟ್ ಅಥವಾ ಸಮಿತಿಯ ಅಥವಾ ಮಂಡಲಿಯ ಯಾವನೇ ಸದಸ್ಯನನ್ನು ಅಮಾನತ್ತಿನಲ್ಲಿಡಬಹುದು ಅಥವಾ ಅವನನ್ನು ತೆಗೆದುಹಾಕಬಹುದು.

18. **ಸೂಪರಿಂಟೆಂಡೆಂಟನು ಕಾರ್ಮಿಕರ ನಿಯೋಜಕರುಗಳಿಗೆ ಯುವಾಪರಾಧಿಗಳ ಬಗ್ಗೆ ಲೈಸೆನ್ಸನ್ನು ಕೊಡಬಹುದು:**—(1) ಹಾಗೆ ನೇಮಕಗೊಂಡ ಪ್ರತಿಯೊಬ್ಬ ಸೂಪರಿಂಟೆಂಡೆಂಟನು, ಸಮಿತಿಯ ಮಂಜೂರಾತಿಯೊಂದಿಗೆ, ತಾನು ರುಜು ಮಾಡಿದ ಲೈಸೆನ್ಸಿನ ಮೂಲಕ, ಹದಿನಾಲ್ಕು ವರ್ಷ ವಯಸ್ಸು ತುಂಬಿರುವ, ಸುಧಾರಣಾ ಶಾಲೆಗೆ ಕಳುಹಿಸಲ್ಪಟ್ಟ ಯಾವನೇ ಯುವಾಪರಾಧಿಗೆ, ಕಾರ್ಮಿಕನ ನಿಯೋಜಕನಾಗಿರುವ ಅಥವಾ ಯುವಾಪರಾಧಿಯನ್ನು ಸ್ವೀಕರಿಸಲು ಮತ್ತು ವಶಕ್ಕೆ ತೆಗೆದುಕೊಳ್ಳಲು ಇಚ್ಛಿಸುವ ಸರ್ಕಾರ ಅಥವಾ ಮುನಿಸಿಪಾಲಿಟಿಯ ಯಾವನೇ ಅಧಿಕಾರಿಯ ವಶದಲ್ಲಿ, ಆ ನಿಯೋಜಕನು ಅಂಥ ಯುವಾಪರಾಧಿಯನ್ನು, ಯಾವುದೇ ಕಸಬು, ಉದ್ಯೋಗ ಅಥವಾ ಆಜೀವಿಕೆಯಲ್ಲಿ ನಿಯೋಜಿಸತಕ್ಕದೆಂಬ ಷರತ್ತಿನ ಮೇಲೆ ಜೀವಿಸಲು ಅನುಮತಿ ಕೊಡಬಹುದು.

(2) ಆ ಲೈಸೆನ್ಸು ಮೂರು ತಿಂಗಳುಗಳಿಗೆ ಮಾತ್ರ ಜಾರಿಯಲ್ಲಿರತಕ್ಕದ್ದು ಮತ್ತು ಅದನ್ನು ವಿನಾ ಜಾರಿಯಲ್ಲಿರತಕ್ಕದ್ದಲ್ಲ. ಆದರೆ ಯಾವುದೇ ಕಾಲದಲ್ಲಿ ಮತ್ತು ಕಾಲಕಾಲಕ್ಕೆ ಯುವಾಪರಾಧಿಯನ್ನು ಯಾವ ಅವಧಿಯವರೆಗೆ ಸುಧಾರಣಾ ಶಾಲೆಯಲ್ಲಿ ಬಂಧಿಸಿಡಬೇಕೆಂದು ನಿರ್ದೇಶಿಸಲಾಗಿದೆಯೋ ಆ ಅವಧಿಯು ಮುಕ್ತಾಯವಾಗುವವರೆಗೆ ಒಂದು ಬಾರಿಗೆ ಮೂರು ತಿಂಗಳಿಗಾಗಿ ಅದನ್ನು ನವೀಕರಿಸಬಹುದು.

19. **ಲೈಸೆನ್ಸುಗಳ ರದ್ದಿಯಾತಿ:**—ಲೈಸೆನ್ಸನ್ನು, ಲೈಸೆನ್ಸಿನಲ್ಲಿ ಹೆಸರಿಸಿದ ನಿಯೋಜಕನ ಇಚ್ಛಾನುಸಾರ ರದ್ದುಪಡಿಸತಕ್ಕದ್ದು.

20. **ಲೈಸೆನ್ಸನ್ನು ಕೊನೆಗೊಳಿಸುವುದು:**—ಲೈಸೆನ್ಸಿನ ಅವಧಿಯಲ್ಲಿ ಅದರಲ್ಲಿ ಹೆಸರಿಸಲಾದ ನಿಯೋಜಕನು ಮರಣ ಹೊಂದಿದರೆ ಅಥವಾ ವ್ಯವಹಾರವನ್ನು ಅಥವಾ ಕಾರ್ಮಿಕರನ್ನು ನಿಯೋಜಿಸಿಕೊಳ್ಳುವುದನ್ನು ನಿಲ್ಲಿಸಿದರೆ ಅಥವಾ ಯಾವ ಅಪರಾಧಕ್ಕಾಗಿ ಸುಧಾರಣಾ ಶಾಲೆಯಲ್ಲಿ ಯುವಾಪರಾಧಿಯನ್ನು ಬಂಧಿಸಿಡಬೇಕೆಂದು ನಿರ್ದೇಶಿಸಲಾಗಿದೆಯೋ ಆ ಅವಧಿಯು ಅಂತ್ಯಗೊಂಡರೆ, ಆ ಲೈಸೆನ್ಸ್ ಆ ತರುವಾಯ ನಿಂತುಹೋಗತಕ್ಕದ್ದು ಮತ್ತು ಕೊನೆಗೊಳ್ಳತಕ್ಕದ್ದು.

21. **ಪೀಡನೆಯ ಸಂದರ್ಭದಲ್ಲಿ ಲೈಸೆನ್ಸಿನ ರದ್ದಿಯಾತಿ :**—ನಿಯೋಜಕನು ಯುವಾಪರಾಧಿಯನ್ನು ಪೀಡಿಸಿದ್ದಾನೆಂದು ಅಥವಾ ಅವನ ವಸತಿ ಮತ್ತು ನಿರ್ವಹಣೆಗಾಗಿ ಸಾಕಷ್ಟು ಏರ್ಪಾಟು ಮಾಡಿಲ್ಲವೆಂದು ಸೂಪರಿಂಟೆಂಡೆಂಟನಿಗೆ ಕಂಡು ಬಂದರೆ, ಅಂಥ ಲೈಸೆನ್ಸನ್ನು ಸೂಪರಿಂಟೆಂಡೆಂಟನು ರದ್ದುಪಡಿಸಬಹುದು.

22. **ಸೂಪರಿಂಟೆಂಡೆಂಟರನ್ನು ಯುವಾಪರಾಧಿಗಳ ಪಾಲಕನೆಂದು ಭಾವಿಸತಕ್ಕದ್ದು. ಯುವಾಪರಾಧಿಯನ್ನು ಉಮೇದುವಾರನನ್ನಾಗಿ ಮಾಡಲು ಅಧಿಕಾರ :**—(1) ಸುಧಾರಣಾ ಶಾಲೆಗಳ ಸೂಪರಿಂಟೆಂಡೆಂಟನನ್ನು 1850ರ 19ನೇ ಸಂಖ್ಯೆಯ ಅಧಿನಿಯಮದ (ಉಮೇದುವಾರರನ್ನು ಬದ್ಧಗೊಳಿಸುವ ಬಗ್ಗೆ) ಅರ್ಥ ವ್ಯಾಪ್ತಿಯಲ್ಲಿ ಅಂತಹ ಶಾಲೆಯಲ್ಲಿ ಬಂಧಿಸಿಟ್ಟ ಪ್ರತಿಯೊಬ್ಬ ಯುವಾಪರಾಧಿಯ ಪಾಲಕನೆಂಬುದಾಗಿ ಭಾವಿಸತಕ್ಕದ್ದು.

(2) 18ನೇ ಪ್ರಕರಣದ ಮೇರೆಗೆ ಲೈಸೆನ್ಸ್ ಪಡೆದ ಯಾವನೇ ಯುವಾಪರಾಧಿಯು ಅವನ ಲೈಸೆನ್ಸಿನ ಒಂದು ಅಥವಾ ಹೆಚ್ಚಿನ ಅವಧಿಗಳಲ್ಲಿ ಸರಿಯಾಗಿ ವರ್ತಿಸಿದ್ದಾನೆಂದು ಸೂಪರಿಂಟೆಂಡೆಂಟನಿಗೆ ಕಂಡು ಬಂದರೆ ಸೂಪರಿಂಟೆಂಡೆಂಟನು ಸಮಿತಿಯ ಮಂಜೂರಾತಿಯೊಂದಿಗೆ ಸದರಿ ಅಧಿನಿಯಮದ ಉಪಬಂಧಗಳ ಮೇರೆಗೆ ಅವನನ್ನು ಉಮೇದುವಾರನನ್ನಾಗಿಸಬಹುದು ಮತ್ತು ಅಂಥ ಉಮೇದುವಾರಿಕೆಯ ಮೇಲೆ ಯುವಾಪರಾಧಿಯನ್ನು ಅಂತಹ ಸುಧಾರಣಾ ಶಾಲೆಗಳಲ್ಲಿ ಬಂಧಿಸಿಡುವ ಹಕ್ಕು ನಿಂತುಹೋಗತಕ್ಕದ್ದು ಮತ್ತು ಅವನ ಶಿಕ್ಷೆಯು ಮುಕ್ತಾಯವಾಗದೆ ಇರುವ ಅವಧಿಯು ಯಾವುದಾದರೂ ಇದ್ದರೆ, ಅದನ್ನು ರದ್ದುಗೊಳಿಸತಕ್ಕದ್ದು.

23. **ಸಂದರ್ಶಕ ಸಮಿತಿಯ ಕರ್ತವ್ಯಗಳು :**—(1) ಸುಧಾರಣಾ ಶಾಲೆಗೆ 17ನೇ ಪ್ರಕರಣದ ಮೇರೆಗೆ ನೇಮಕಗೊಂಡ ಸಂದರ್ಶಕರ ಪ್ರತಿಯೊಂದು ಸಮಿತಿಯು ಕನಿಷ್ಠ ಪಕ್ಷ ಪ್ರತಿ ತಿಂಗಳಿಗೊಮ್ಮೆ,—

(ಕ) ಶಾಲೆಗಳಿಗೆ ಭೇಟಿ ಕೊಟ್ಟು ದೂರುಗಳನ್ನು ಕೇಳತಕ್ಕದ್ದು ಮತ್ತು 6ನೇ ಪ್ರಕರಣದ ಅವಶ್ಯಕತೆಗಳನ್ನು ಪಾಲಿಸಲಾಗಿದೆಯೇ ಮತ್ತು ಶಾಲಾ ವ್ಯವಸ್ಥಾಪನೆಯು ಎಲ್ಲಾ ವಿಧದಿಂದ ಸರಿಯಾಗಿದೆಯೇ ಎಂಬುದನ್ನು ನೋಡತಕ್ಕದ್ದು ;

(ಖ) ಶಿಕ್ಷೆಯ ಪುಸ್ತಕವನ್ನು ಪರೀಕ್ಷಿಸತಕ್ಕದ್ದು ;

(ಗ) ಯಾವುದೇ ವಿಶೇಷ ಪ್ರಕರಣವನ್ನು ಇನ್ಸ್‌ಪೆಕ್ಟರ್ ಜನರಲ್‌ನ ಗಮನಕ್ಕೆ ತರತಕ್ಕದ್ದು ; ಮತ್ತು

(ಘ) ಶಾಲೆಯಲ್ಲಿ ಯಾವನೇ ವ್ಯಕ್ತಿಯನ್ನು ಕಾನೂನು ಬಾಹಿರವಾಗಿ ಬಂಧಿಸಿಡದಂತೆ ನೋಡಿಕೊಳ್ಳತಕ್ಕದ್ದು.

(2) ಹಾಗೆ ನೇಮಕಗೊಂಡ ಸಂದರ್ಶಕರ ಸಮಿತಿಯ ಯಾವನೇ ಸದಸ್ಯನು ಕ್ರಮಾನುಗತ ಆರು ತಿಂಗಳುಗಳ ಅವಧಿಯಲ್ಲಿ ಶಾಲೆಗೆ ಭೇಟಿ ಕೊಡಲು ಮತ್ತು ಹಿಂದೆ ಹೇಳಲಾದ ಕರ್ತವ್ಯಗಳ ನಿರ್ವಹಣೆಗೆ ಸಹಾಯ ನೀಡಲು ತಪ್ಪಿದರೆ ಅಥವಾ ನಿರ್ಲಕ್ಷ್ಯ ತೋರಿದರೆ, ಅವನು ಅಂಥ ಸಮಿತಿಯ ಸದಸ್ಯನಾಗಿರುವುದು ನಿಂತುಹೋಗತಕ್ಕದ್ದು.

24. **ಆಡಳಿತ ಮಂಡಲಿಯ ಅಧಿಕಾರಗಳು :**—17ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ರಾಜ್ಯ ಸರ್ಕಾರವು, ಯಾವುವೇ ಸುಧಾರಣಾ ಶಾಲೆಗಳಿಗಾಗಿ ವ್ಯವಸ್ಥಾಪನಾ ಮಂಡಲಿಯನ್ನು ನೇಮಿಸಿದ್ದರೆ, ಅಂಥ ಮಂಡಲಿಯು 18ರಿಂದ 22ನೇ (ಎರಡೂ ಸೇರಿ) ಪ್ರಕರಣಗಳ ಮೇರೆಗಿನ ಸೂಪರಿಂಟೆಂಡೆಂಟನ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಮತ್ತು 18ನೇ ಪ್ರಕರಣದಲ್ಲಿ ನಮೂದಿಸಿರುವ ಲೈಸೆನ್ಸು ಮಂಡಲಿಯ ಅಧ್ಯಕ್ಷರ ರುಜುವನ್ನು ಹೊಂದಿರಬಹುದು ಮತ್ತು ಅವರನ್ನು ಅಂಥ ಶಾಲೆಯಲ್ಲಿ ಬಂಧಿಸಿಟ್ಟಿರುವ ಯುವಾಪರಾಧಿಗಳ ಪಾಲಕರೆಂದು ಭಾವಿಸತಕ್ಕದ್ದು.

25. **ಶಾಲೆಯ ಟ್ರಸ್ಟಿಗಳನ್ನು ಅಥವಾ ಇತರ ವ್ಯವಸ್ಥಾಪಕರನ್ನು ವ್ಯವಸ್ಥಾಪನಾ ಮಂಡಲಿಯಿಂದು ನೇಮಕ ಮಾಡಲು ಅಧಿಕಾರ :**—ರಾಜ್ಯ ಸರ್ಕಾರವು, 5ನೇ ಪ್ರಕರಣದ (ಖ) ಖಂಡದಲ್ಲಿ ಉಲ್ಲೇಖಿಸಿದ ನಿಯಮಗಳಿಗನುಗುಣವಾಗಿ

ಕಾರ್ಯನಿರ್ವಹಿಸಲು ಒಪ್ಪುವ ಶಾಲೆಯ ಟ್ರಸ್ಟಿಗಳ ನಿಕಾಯವನ್ನು ಅಥವಾ ವ್ಯವಸ್ಥಾಪಕರುಗಳ ನಿಕಾಯವನ್ನು ಈ ಅಧಿನಿಯಮದ ಮೇರೆಗೆ ವ್ಯವಸ್ಥಾಪನ ಮಂಡಲಿಯೆಂದು ಘೋಷಿಸಬಹುದು ಮತ್ತು ಆ ತರುವಾಯ ಅಂಥ ನಿಕಾಯ ಅಥವಾ ವ್ಯವಸ್ಥಾಪಕರುಗಳು, ವ್ಯವಸ್ಥಾಪನ ಮಂಡಲಿಯ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದು ಮತ್ತು ಎಲ್ಲ ಪ್ರಕಾರ್ಯಗಳನ್ನು ನೆರವೇರಿಸತಕ್ಕದು.

**26. ನಿಯಮಗಳನ್ನು ರಚಿಸಲು ಮಂಡಲಿಯ ಅಧಿಕಾರ :**—(1) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ಸುಧಾರಣಾ ಶಾಲೆಯ ಪ್ರತಿಯೊಂದು ವ್ಯವಸ್ಥಾಪಕರ ಮಂಡಲಿಯು ಕಾಲಕಾಲಕ್ಕೆ ಈ ಅಧಿನಿಯಮಕ್ಕೆ ಸುಸಂಗತವಾದ,—

(i) ''ನಿಷೇಧಿತ ವಸ್ತು'' ಗಳೆಂದು ಭಾವಿಸಬೇಕಾದಂಥ ವಸ್ತುಗಳನ್ನು ನಿಯಮಿಸಲು ; ಮತ್ತು

(ii) (ಕ) ಮಂಡಲಿಯ ವ್ಯವಹಾರವನ್ನು ನಡೆಸುವುದನ್ನು ;

(ಖ) ಶಾಲೆಯ ವ್ಯವಸ್ಥಾಪನೆಯನ್ನು ;

(ಗ) ಯುವಾಪರಾಧಿಗಳ ಶಿಕ್ಷಣ ಮತ್ತು ಕೈಗಾರಿಕಾ ತರಬೇತಿಯನ್ನು ;

(ಘ) ಯುವಾಪರಾಧಿಗಳೊಂದಿಗೆ ಭೇಟಿ ಮತ್ತು ಅವರೊಂದಿಗೆ ಸಂಪರ್ಕವನ್ನು ;

(ಙ) ಮಂಡಲಿಯಿಂದ ''ನಿಷೇಧಿತ ವಸ್ತು'' ಗಳೆಂದು ಘೋಷಿತವಾದ ಯಾವುವೇ ವಸ್ತುಗಳನ್ನು ಶಾಲೆಯ ಒಳಗೆ ತರುವುದಕ್ಕೆ ಅಥವಾ ಹೊರಗೆ ತೆಗೆದುಕೊಂಡು ಹೋಗುವುದಕ್ಕೆ ನಿಬಂಧನೆ ಮತ್ತು ಷರತ್ತುಗಳು ;

(ಚ) ಸೂಕ್ತ ಅಧಿಕಾರವಿಲ್ಲದ ಅಂಥ ವಸ್ತುಗಳನ್ನು ಒಳತಂದಾಗ ಅವನ್ನು ಸ್ಥಳಾಂತರಿಸುವ ರೀತಿ ;

(ಛ) ಅಲ್ಲಿ ಬಂಧನ ಆದೇಶದ ಮೇರೆಗೆ ಇರುವ ಯಾವನೇ ಯುವಾಪರಾಧಿಗೆ ಶಾಲೆಯ ಹೊರಗಡೆ ಅಂಥ ವಸ್ತುಗಳನ್ನು ಸರಬರಾಜು ಮಾಡುವುದಕ್ಕಾಗಿನ ಷರತ್ತುಗಳು ಮತ್ತು ಪರಿಮಿತಿಗಳು ;

(ಜ) ಯಾವನೇ ಅಂಥ ಯುವಾಪರಾಧಿ ಅಂಥ ವಸ್ತುಗಳನ್ನು ಸ್ವಾಧೀನದಲ್ಲಿ ಹೊಂದಿರಲು ಮಂಜೂರಾತಿ ಕೊಡುವುದಕ್ಕಾಗಿನ ಷರತ್ತುಗಳು ;

(ಝ) ಸೂಕ್ತ ಅಧಿಕಾರವಿಲ್ಲದೆ ಅಂಥ ವಸ್ತುಗಳನ್ನು ಸರಬರಾಜು ಮಾಡಿದಾಗ ಅಥವಾ ಹೊಂದಿದ್ದಾಗ ವಿಧಿಸಬಹುದಾದ ದಂಡನೆಗಳು ;

(ಞ) ಯುವಾಪರಾಧಿಗಳು ಮಾಡಿದ ಅಪರಾಧಗಳಿಗೆ ಶಿಕ್ಷೆ; ಮತ್ತು

(ಟ) ಯುವಾಪರಾಧಿಯ ನಿಯೋಜನೆಗಾಗಿ ಲೈಸೆನ್ಸು ಮಂಜೂರು ಮಾಡುವುದು

—ಇವುಗಳನ್ನು ವಿನಿಯಮಿಸಲು ನಿಯಮಗಳನ್ನು ರಚಿಸಬಹುದು.

(2) ವ್ಯವಸ್ಥಾಪನಾ ಮಂಡಲಿ ಇಲ್ಲದಿರುವಲ್ಲಿ ರಾಜ್ಯ ಸರ್ಕಾರವು, (ii) (ಕ) ಖಂಡವನ್ನು ಹೊರತುಪಡಿಸಿ, (1)ನೇ ಉಪಪ್ರಕರಣದ ಯಾವುದೇ ಖಂಡದಲ್ಲಿ ನಮೂದಿಸಿದ ವಿಷಯಗಳನ್ನು ಯಾವುದೇ ಸುಧಾರಣಾ ಶಾಲೆಗೆ ವಿನಿಯಮಿಸಲು ಮತ್ತು ಸಂದರ್ಶಕ ಸಮಿತಿಯು ಅವರ ವ್ಯವಹಾರಗಳನ್ನು ನಿರ್ವಹಿಸುವ ವಿಧಾನದ ಬಗ್ಗೆಯೂ ಈ ಅಧಿನಿಯಮಕ್ಕೆ ಸುಸಂಗತವಾದ ನಿಯಮಗಳನ್ನು ರಚಿಸಬಹುದು.

## IV ಸುಧಾರಣಾ ಶಾಲೆಗಳಿಗೆ ಸಂಬಂಧಿಸಿದ್ದ ಅಪರಾಧಗಳು

**27. ನಿಷೇಧಿತ ವಸ್ತುಗಳನ್ನು ಒಳತರುವುದು ಅಥವಾ ಸ್ಥಳಾಂತರಿಸುವುದು ಅಥವಾ ಸರಬರಾಜು ಮಾಡುವುದಕ್ಕೆ ಮತ್ತು ಯುವಾಪರಾಧಿಗಳೊಂದಿಗೆ ಸಂಪರ್ಕಕ್ಕೆ ದಂಡನೆ :**—ಯಾರೇ ಆಗಲಿ, 26ನೇ ಪ್ರಕರಣದ ಮೇರೆಗೆ ರಚಿಸಲಾದ ಯಾವುದೇ ನಿಯಮಕ್ಕೆ ವಿರುದ್ಧವಾಗಿ ಯಾವುದೇ ರೀತಿಯಲ್ಲಿ ಯಾವುದೇ ನಿಷೇಧಿತ ವಸ್ತುವನ್ನು ಸುಧಾರಣಾ ಶಾಲೆಯೊಳಗೆ ತಂದರೆ ಅಥವಾ ಅಲ್ಲಿಂದ ತೆಗೆದುಕೊಂಡು ಹೋದರೆ ಅಥವಾ ಯಾವುದೇ ರೀತಿಯಲ್ಲಿ ಒಳತರಲು ಅಥವಾ ಅಲ್ಲಿಂದ ತೆಗೆದುಕೊಂಡು ಹೋಗಲು ಪ್ರಯತ್ನ ಮಾಡಿದರೆ ಅಥವಾ ಸುಧಾರಣಾ ಶಾಲೆಯಲ್ಲಿ ಬಂಧನದ ಆದೇಶದ ಮೇಲಿರುವಂತಹ ಯಾವನೇ ಯುವಾಪರಾಧಿಗೆ ಯಾವುದೇ ಸುಧಾರಣಾ ಶಾಲೆಯ ಪರಿಮಿತಿಯ ಹೊರಗಡೆ ಸರಬರಾಜು ಮಾಡಿದರೆ ಅಥವಾ ಸರಬರಾಜು ಮಾಡಲು ಪ್ರಯತ್ನ ಮಾಡಿದರೆ ;

ಮತ್ತು ಸುಧಾರಣಾ ಶಾಲೆಯ ಪ್ರಭಾರದಲ್ಲಿರುವ ಪ್ರತಿಯೊಬ್ಬ ಅಧಿಕಾರಿಯು ಅಥವಾ ವ್ಯಕ್ತಿಯು ಅಂತಹ ಯಾವುದೇ ನಿಯಮದ ವಿರುದ್ಧವಾಗಿ ಅಂತಹ ವಸ್ತುವನ್ನು ಸುಧಾರಣಾ ಶಾಲೆಯ ಒಳಗೆ ತರಲು ಅಥವಾ ಅಲ್ಲಿಂದ ಸ್ಥಳಾಂತರಿಸಲು ಸುಧಾರಣಾ ಶಾಲೆಯಲ್ಲಿ ಬಂಧಿತನಾದ ಯಾವನೇ ಯುವಾಪರಾಧಿಯು ಅದನ್ನು ಹೊಂದಿರಲು ಅಥವಾ ಅಂತಹ ಯಾವನೇ ಯುವಾಪರಾಧಿಗೆ ಅದರ ಮಿತಿಯಿಂದ ಹೊರಗೆ ಸರಬರಾಜು ಮಾಡಲು ತಿಳಿದೂ ತಿಳಿದೂ ಎಡೆಗೊಟ್ಟರೆ ;

ಮತ್ತು ಯಾವನೇ ವ್ಯಕ್ತಿಯು, ಅಂತಹ ಯಾವುದೇ ನಿಯಮದ ವಿರುದ್ಧವಾಗಿ ಯಾವನೇ ಯುವಾಪರಾಧಿಯನ್ನು ಸಂಪರ್ಕಿಸಿದರೆ ಅಥವಾ ಸಂಪರ್ಕಿಸಲು ಪ್ರಯತ್ನಿಸಿದರೆ ;

ಯಾವನೇ ವ್ಯಕ್ತಿಯು ಈ ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕೆ ದುಷ್ಪ್ರೇರಣೆ ಮಾಡಿದರೆ

–ಮ್ಯಾಜಿಸ್ಟ್ರೇಟನ ಮುಂದೆ ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳಿಗೆ ಮೀರದ ಅವಧಿಯ ಕಾರವಾಸಕ್ಕೆ ಅಥವಾ ಎರಡು ನೂರು ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಅಥವಾ ಅವೆರಡಕ್ಕೂ ಗುರಿಯಾಗತಕ್ಕದು.

**28. ಯುವಾಪರಾಧಿಯು ತಪ್ಪಿಸಿಕೊಳ್ಳಲು ಅವನನ್ನು ದುಷ್ಪ್ರೇರಿಸಿದ್ದಕ್ಕಾಗಿ ದಂಡನೆ :**—ಯಾವನೇ ವ್ಯಕ್ತಿಯು ಸುಧಾರಣಾ ಶಾಲೆಯಿಂದ ಅಥವಾ ಅಂಥ ಯುವಾಪರಾಧಿಯ ನಿಯೋಜಕನಿಂದ ಒಬ್ಬ ಯುವಾಪರಾಧಿಯು ತಪ್ಪಿಸಿಕೊಳ್ಳಲು ಅಥವಾ ತಪ್ಪಿಸಿಕೊಳ್ಳಲು ಪ್ರಯತ್ನಿಸುವುದಕ್ಕೆ ದುಷ್ಪ್ರೇರಿಸಿದರೆ, ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಅಥವಾ ಎರಡು ನೂರು ರೂಪಾಯಿಗೆ ಮೀರದ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

**29. ತಪ್ಪಿಸಿಕೊಂಡ ಯುವಾಪರಾಧಿಯ ದಸ್ತಗಿರಿ :**—ಪೊಲೀಸ್ ಅಧಿಕಾರಿಯು ಮ್ಯಾಜಿಸ್ಟ್ರೇಟ್‌ನಿಂದ ಆದೇಶವಿಲ್ಲದೆ ಮತ್ತು ವಾರಂಟಿಲ್ಲದೆ ಸುಧಾರಣಾ ಶಾಲೆ ಅಥವಾ ಅವನ ನಿಯೋಜಕನಿಂದ ತಪ್ಪಿಸಿಕೊಂಡ, ಈ ಅಧಿನಿಯಮನ್ನು ಮೇರೆಗೆ ಸುಧಾರಣಾ ಶಾಲೆಗೆ ಕಳುಹಿಸಲಾದ ಯಾವನೇ ಯುವಾಪರಾಧಿಯನ್ನು ದಸ್ತಗಿರಿ ಮಾಡಬಹುದು ಮತ್ತು ಅವನನದ ಅಂಥ ಶಾಲೆಗೆ ಅಥವಾ ಅವನ ನಿಯೋಜಕನಿಗೆ ಹಿಂದಕ್ಕೆ ಒಪ್ಪಿಸತಕ್ಕದು.

## V—ಸಂಕೀರ್ಣ

**30. (ಸುಧಾರಣಾ ಶಾಲೆಗಳಲ್ಲಿ ಬಂಧಿಸಿಟ್ಟ ಯುವಾಪರಾಧಿಗಳಿಗೆ 1869ರ 15ನೇ ಅಧಿನಿಯಮದ ಅನ್ವಯ) :**—ಬಂಧಿಗಳ ಅಧಿನಿಯಮ, 1900ರ (1900ರ 3) 53ನೇ ಪ್ರಕರಣದ IIIನೇ ಅನುಸೂಚಿಯಿಂದ ನಿರಸನಗೊಳಿಸಲಾಗಿದೆ.

**31. ಹುಡುಗಿಯರೂ ಸೇರಿದಂತೆ, ಯುವಾಪರಾಧಿಗಳೊಂದಿಗೆ ಇತರ ರೀತಿಗಳಲ್ಲಿ ವ್ಯವಹರಿಸಲು ಅಧಿಕಾರ :**— (1) ಈ ಅಧಿನಿಯಮದಲ್ಲಿ ಅಥವಾ ಈಗ ಜಾರಿಯಲ್ಲಿರುವ ಯಾವುದೇ ಇತರ ಅಧಿನಿಯಮಿತಿಯಲ್ಲಿ ಏನೇ ಅಡಕವಾಗಿದ್ದಾಗ್ಯೂ, ಯಾವುದೇ ನ್ಯಾಯಾಲಯವು, ಅದು ಸೂಕ್ತವೆಂದು ಯೋಚಿಸಿದರೆ ಯಾವನೇ ಯುವಾಪರಾಧಿಗೆ ಗಡಿಪಾರು ಅಥವಾ ಕಾರಾವಾಸದ ಶಿಕ್ಷೆಯನ್ನು ವಿಧಿಸುವುದಕ್ಕೆ ಬದಲು ಅಥವಾ ಸುಧಾರಣಾ ಶಾಲೆಯಲ್ಲಿ ಅವನನ್ನು ಬಂಧನದಲ್ಲಿಡಬೇಕೆಂದು ನಿರ್ದೇಶಿಸುವುದಕ್ಕೆ ಬದಲು,—

(ಕ) ಯುಕ್ತ ವಾಗ್ದಂಡನೆಯ ತರುವಾಯ ವಿಮೋಚನೆಗೊಳಿಸುವಂತೆ ; ಅಥವಾ

(ಖ) ಅವನ ತಂದೆ ತಾಯಿ ಅಥವಾ ಅವನ ಪಾಲಕ ಅಥವಾ ನಿಕಟ ವಯಸ್ಕ ಸಂಬಂಧಿ, ಇವರುಗಳಿಗೆ, ಅಂತಹ ತಂದೆ, ಪೋಷಕ ಅಥವಾ ಸಂಬಂಧಿಯು ನ್ಯಾಯಾಲಯವು ಬಯಸಬಹುದಾದಂತೆ ಜಾಮೀನು ಸಹಿತ ಅಥವಾ ಜಾಮೀನುರಹಿತ ಹನ್ನೆರಡು ತಿಂಗಳಿಗೆ ಮೀರದಂತೆ ಯಾವುದೇ ಅವಧಿಗಾಗಿ ಯುವಾಪರಾಧಿಯ ಒಳ್ಳೆಯ ನಡತೆಯ ಬಗ್ಗೆ ತಾವು ಜವಾಬ್ದಾರರಾಗಿರುತ್ತೇವೆಂದು ಒಂದು ಬಂಧಪತ್ರವನ್ನು ಬರೆದುಕೊಟ್ಟ ಮೇಲೆ ಅವನನ್ನು ವಶಾವಣೆ ಮಾಡಬೇಕೆಂದು

—ಆದೇಶಿಸಬಹುದು.

(2) ಈ ಪ್ರಕರಣದ ಉದ್ದೇಶಕ್ಕಾಗಿ "ಯುವಾಪರಾಧಿ" ಎಂಬ ಪದವು ಹುಡುಗಿಯನ್ನು ಒಳಗೊಳ್ಳತಕ್ಕದು.

(3) ಈ ಪ್ರಕರಣದ ಮೂಲಕ ನ್ಯಾಯಾಲಯಕ್ಕೆ ಪ್ರದತ್ತವಾದ ಅಧಿಕಾರಗಳನ್ನು 8ನೇ ಪ್ರಕರಣದ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಲಾದ ನ್ಯಾಯಾಲಯಗಳು ಮಾತ್ರ ಚಲಾಯಿಸತಕ್ಕದು.

(4) ಈ ಪ್ರಕರಣದ ಮೇರೆಗೆ ವ್ಯವಹರಿಸಲು ಅಧಿಕೃತವಾಗಿರದ ಒಂದು ನ್ಯಾಯಾಲಯದಿಂದ ಯಾವನೇ ಯುವಾಪರಾಧಿಯು ಅಪರಾಧಿಯೆಂದು ನಿರ್ಣೀತನಾದಾಗ ಮತ್ತು ಈ ಪ್ರಕರಣದ ಮೇರೆಗೆ ನೀಡಲಾದ ಅಧಿಕಾರಗಳನ್ನು ಅಂತಹ ಯುವಾಪರಾಧಿಯ ಸಂಬಂಧದಲ್ಲಿ ಚಲಾಯಿಸತಕ್ಕದು ಎಂದು ಅಂಥ ನ್ಯಾಯಾಲಯವು ಅಭಿಪ್ರಾಯಪಟ್ಟಾಗ, ಅದು ಅಂತಹ ಅಭಿಪ್ರಾಯವನ್ನು ದಾಖಲು ಮಾಡಬಹುದು ಮತ್ತು ಅಂತಹ ನ್ಯಾಯಾಲಯವು ಯಾವ ಜಿಲ್ಲಾ ಮ್ಯಾಜಿಸ್ಟ್ರೇಟನ ಅಧೀನದಲ್ಲಿರುತ್ತದೆಯೋ ಆ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ವ್ಯವಹರಣೆಗಳನ್ನು ಸಲ್ಲಿಸಬೇಕು ಹಾಗೂ ಯುವಾಪರಾಧಿಯನ್ನು ಅಲ್ಲಿಗೆ ಕಳುಹಿಸಿಕೊಡತಕ್ಕದು.

(5) ಯಾವ ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ವ್ಯವಹರಣೆಗಳನ್ನು ಹಾಗೆ ಸಲ್ಲಿಸಲಾಗಿದೆಯೋ ಆ ಜಿಲ್ಲಾ ಮ್ಯಾಜಿಸ್ಟ್ರೇಟನು ಆ ತರುವಾಯ ಆ ಪ್ರಕರಣವನ್ನು ತಾನೇ ಮೂಲತಃ ವಿಚಾರಣೆ ನಡೆಸಿದ್ದಿದ್ದರೆ ಮಾಡಬಹುದಾಗಿದ್ದ ಆದೇಶವನ್ನು ಅಥವಾ ನೀಡಬಹುದಾಗಿದ್ದ ತೀರ್ಪನ್ನು ಮಾಡತಕ್ಕದು ಅಥವಾ ನೀಡತಕ್ಕದು.

**32. ಸುಧಾರಣಾ ಶಾಲೆಯಲ್ಲಿ ಬಂಧನದಲ್ಲಿರುವ ಯುವಾಪರಾಧಿಯು ಪುನಃ ಅಪರಾಧಿಯೆಂದು ನಿರ್ಣೀತನಾಗಿ ಶಿಕ್ಷೆಯ ತೀರ್ಪಿಗೊಳಗಾದಾಗ ಅನುಸರಿಸಬೇಕಾದ ಪ್ರಕ್ರಿಯೆ :**—ಸುಧಾರಣಾ ಶಾಲೆಯಲ್ಲಿ ಬಂಧನದಲ್ಲಿರುವ ಅವಧಿಯಲ್ಲಿ ಯುವಾಪರಾಧಿಯು ಪುನಃ ಒಂದು ಕ್ರಿಮಿನಲ್ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾದಾಗ ದಂಡ ಪ್ರಕ್ರಿಯಾ ಸಂಹಿತೆ, 1882ರ (1882ರ 10) 397ನೇ ಪ್ರಕರಣದಲ್ಲಿ ತದ್ವಿರುದ್ಧವಾಗಿ ಏನೇ ಇದ್ದರೂ, ಅಂತಹ ನ್ಯಾಯಾಲಯದ ಶಿಕ್ಷೆಯು ಕೂಡಲೇ ಪ್ರಾರಂಭವಾಗತಕ್ಕದು. ಆದರೆ ನ್ಯಾಯಾಲಯವು ರಾಜ್ಯ ಸರ್ಕಾರಕ್ಕೆ ಈ ವಿಷಯವನ್ನು ಕೂಡಲೇ ವರದಿ ಮಾಡತಕ್ಕದು. ರಾಜ್ಯ ಸರ್ಕಾರವು ಈ ವಿಷಯದಲ್ಲಿ ತಾನು ಸೂಕ್ತವೆಂದು ಯೋಚಿಸುವ ಯಾವುದೇ ರೀತಿಯಲ್ಲಿ ವ್ಯವಹರಿಸಲು ಅಧಿಕಾರ ಹೊಂದಿರತಕ್ಕದು.

ಮೇಲ್ಕಂಡ ಸುಧಾರಣಾ ಶಾಲೆಗಳ ಅಧಿನಿಯಮ, 1897 (1897ರ 8)ರ ಕನ್ನಡ ಭಾಷಾಂತರವನ್ನು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ (ಕ) ಖಂಡದ ಮೇರೆಗೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲು ರಾಷ್ಟ್ರಪತಿಯವರು ಅಧಿಕೃತಗೊಳಿಸಿದ್ದಾರೆ,

ನವದೆಹಲಿ,
ದಿನಾಂಕ

ಕಾರ್ಯದರ್ಶಿ,
ಭಾರತ ಸರ್ಕಾರ

The above translation in Kannada of (8 of 1897) The Reformatory Schools Act, 1897 has been authorised by the President to be published in the Official Gazette under clause (a) of Section 2 of the Authoritative Texts (Central Laws) Act, 1973

V. S RAMADEVI,
Secretary to the Govt. of India.

New Delhi,
Date :

I P 8060